# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

### ಸ್ಪೆಷಲ್ ಕೇಸ್ ನಂ. 142/2022

**ದೋ.ಸಾ. : 6 ಫ್ರಾ.ಸಾ. : 06**

| | | |
|---|---|---|
| ಸಾಕ್ಷಿಯ ಹೆಸರು | : | ಆನಂದ ಬೋವಿವಡ್ಡರ |
| ತಂದೆಯ ಹೆಸರು | : | ದುರ್ಗಪ್ಪ ಬೋವಿವಡ್ಡರ |
| ವಯಸ್ಸು | : | 32 ವರ್ಷ |
| ಕೆಲಸ | : | ಗೌಂಡಿ ಕೆಲಸ |
| ಹಾಲಿ ವಾಸ | : | ಕೊಲ್ಲಾಪುರ, ಮಹಾರಾಷ್ಟ್ರ. |
| ಖಾಯಂ ವಾಸ | : | ಆಶ್ರಯ ಕಾಲೋನಿ, ಗಾಂಧಿನಗರ, ದಾಂಡೇಲಿ. |

**ದಿನಾಂಕಃ 18-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಮೃತ ಸುಶೀಲಾ ನನ್ನ ತಾಯಿ. ಚಾಸಾ-1 ಶೋಭಾ ನನ್ನ ಅಕ್ಕ. ಚಾಸಾ-7 ಮಂಜುನಾಥ ನನ್ನ ದೊಡ್ಡಮ್ಮನ ಮಗ. ನಾವು ದಾಂಡೇಲಿಯ ಆಶ್ರಯ ಕಾಲೋನಿಯಲ್ಲಿ ವಾಸವಾಗಿದ್ದೆವು. ನಮ್ಮ ಮನೆಯಲ್ಲಿ ನಾನು, ನನ್ನ ತಾಯಿ, ನನ್ನ ಅಕ್ಕ ಹಾಗೂ ಅಜ್ಜ-ಅಜ್ಜಿ ವಾಸವಾಗಿದ್ದೆವು. ನನ್ನ ಅಕ್ಕ ಚಾಸಾ-1 ಶೋಭಾ ಯಲ್ಲಾಪುರದಲ್ಲಿ ತನ್ನ ಗಂಡನ ಮನೆಯಲ್ಲಿ ವಾಸವಾಗಿದ್ದಳು. ನಾನು ಸಹಾ ಮದುವೆಯಾದ ನಂತರ ತನ್ನ ಹೆಂಡತಿಯೊಂದಿಗೆ ಗಾವುಟಾನದಲ್ಲಿ ವಾಸವಾಗಿದ್ದೆನು ಹಾಗೂ ಗೌಂಡಿ ಕೆಲಸ ಮಾಡುತ್ತಿದ್ದೆನು. ನಾವು ಪರಿಶಿಷ್ಟ ಜಾತಿಯ ಬೋವಿವಡ್ಡರ ಜನಾಂಗಕ್ಕೆ ಸೇರಿದವರಾಗಿರುತ್ತೇವೆ. ಈ ಪ್ರಕರಣದ 2 ನೇ ಆರೋಪಿ ನನಗೆ ಗೊತ್ತು, ಆತನು ಸಹಾ ಆಶ್ರಯ ಕಾಲೋನಿಯಲ್ಲಿ ವಾಸವಾಗಿದ್ದ ಹಾಗೂ ಅವನು ಸಹಾ ಪರಿಶಿಷ್ಟ ಜಾತಿಗೆ ಸೇರಿದವನು. ನನ್ನ ತಾಯಿ ಮೊದಲು ಕೂಲಿ ಕೆಲಸ ಮಾಡುತ್ತಿದ್ದಳು. ಆನಂತರ ಜೋಯಿಡಾ ತಾಲೂಕಿನ ಪೋಟೋಳಿಯ ನೇಚರ್ ನೆಸ್ಟ್ ಹೋಮ್ ಸ್ಟೇನಲ್ಲಿ ಪಾತ್ರೆ ತೊಳೆಯುವ ಹಾಗೂ ಕಸ ತೆಗೆಯುವ ಕೆಲಸಕ್ಕೆ ಸೇರಿಕೊಂಡಿದ್ದಳು ಹಾಗೂ ಸದರಿ ಹೋಮ ಸ್ಟೇನಲ್ಲಿ ನನ್ನ ತಾಯಿಗೆ ಉಳಿದುಕೊಳ್ಳಲು ಪ್ರತ್ಯೇಕ ರೂಮ್ ನೀಡಲಾಗಿತ್ತು. 2 ನೇ ಆರೋಪಿ ಸಹಾ ಅದೇ ಹೋಮ್ ಸ್ಟೇನಲ್ಲಿ ಕೆಲಸ ಮಾಡುತ್ತಿದ್ದ. ಈಗ ನ್ಯಾಯಾಲಯದ ಮುಂದಿರುವ

1 ನೇ ಆರೋಪಿ ನನಗೆ ಗೊತ್ತು, ನಾನು ತಾಯಿಯನ್ನು ನೋಡಲು ಹೋಮ್ ಸ್ಟೇಗೆ ಹೋದಾಗ ಆತನ ಪರಿಚಯವಾಗಿರುತ್ತದೆ ಹಾಗೂ ಆತ ರೆಡ್ಡಿ ಜನಾಂಗಕ್ಕೆ ಸೇರಿದ್ದು, ಅವನೂ ಸಹಾ ಸದರಿ ಹೋಮ್ ಸ್ಟೇನಲ್ಲಿ ಕೆಲಸ ಮಾಡುತ್ತಿದ್ದ. ನಾವು ಬೋವಿವಡ್ಡರ ಜನಾಂಗಕ್ಕೆ ಸೇರಿದವರು ಎಂದು 1 ನೇ ಆರೋಪಿಗೆ ಗೊತ್ತಿರುತ್ತದೆ.

(ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದುಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ